# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ರವರ ನ್ಯಾಯಾಲಯ, ಚಾಮರಾಜನಗರ

## ಸಿಸಿ ಸಂಖ್ಯೆ 1671/2022

| | | |
|---|---|---|
| **ಫಿರ್ಯಾದಿ** | : | **ಗ್ರಾಮಾಂತರ ಪೊಲೀಸ್ ಠಾಣೆ,**<br>ಚಾಮರಾಜನಗರ |

**ವಿರುದ್ಧ**

| | | |
|---|---|---|
| **ಆರೋಪಿ** | : | **ನಾಗ.ಸಿ**<br>ಬಿನ್ ಚಿಕ್ಕಮಾದಶೆಟ್ಟಿ<br>ವಯಸ್ಸು 36 ವರ್ಷ,<br>ಕೂಲಿ ಕೆಲಸ,<br>ವಾಸಃ ಬೇಡರಪುರ ಗ್ರಾಮ,<br>ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ. |

## ದಂಡ ಪ್ರಕ್ರಿಯಾ ಸಂಹಿತೆ 313 ರನ್ವಯ ಆರೋಪಿತರ ಹೇಳಿಕೆ

**ಪ್ರಶ್ನೆ 1** ಈ ಪ್ರಕರಣದಲ್ಲಿ ಅಭಿಯೋಜಕರು ವಿಚಾರಣೆ ಮಾಡಿದ ಸಾಕ್ಷಿಗಳ ಹೇಳಿಕೆಯನ್ನು ಕೇಳಿ ಅರ್ಥ ಮಾಡಿಕೊಂಡಿದ್ದೀರಾ?

**ಉತ್ತರ**:

**ಪ್ರಶ್ನೆ 2** ಫ್ರಾಸಾ 3- ಉದಯಕುಮಾರ್ ಮತ್ತು ಫ್ರಾಸಾ-6 ರಾಜೇಂದ್ರ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 08.02.2022ರಂದು ಸಂಜೆಃ 4.30 ಗಂಟೆ ಸಮಯದಲ್ಲಿ ಚಾಸಾ-1 ರವರು ಸಿಬ್ಬಂದಿಯವರ ಜೊತೆ ಮರಿಯಾಲದ ಹುಂಡಿ ಗ್ರಾಮದ ಕಡೆಗೆ ಗಸ್ತು ಮಾಡಲು ಕರೆದುಕೊಂಡು ಹೋದರು. ಚಾಸಾ-1ರವರಿಗೆ ಬಾತ್ಮಿದಾರರಿಂದ ಬಂದ ಮಾಹಿತಿ ಏನೆಂದರೆ ಬೇಡರಪುರ ಗ್ರಾಮದ ರಸ್ತೆಯಲ್ಲಿ ಯಾರೋ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯೆ ಸಾಗಿಸುತ್ತಿದ್ದಾನೆ ಎಂದು ವರ್ತಮಾನ ಬಂದಿದ್ದರಿಂದ ಕೂಡಲೇ ನಾವು ಅಲ್ಲಿಗೆ ಇಲಾಖಾ ಜೀಪಿನಲ್ಲಿ ಹೋಗುವಾಗ ಮಾರ್ಗ ಮಧ್ಯದಲ್ಲಿ ಚಾಸಾ-2 ಮತ್ತು 3ರವರನ್ನು ಪಂಚರ ಸಾಕ್ಷಿಯಾಗಿ ಅವರಿಗೆ ಮಾಹಿತಿ ತಿಳಿಸಿ ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋದೆವು. ಬೇಡರಪುರ ರಸ್ತೆಯ ಹಳೆ

ರೈಲ್ವೆ ಬ್ರಿಡ್ಜ್ ಪಕ್ಕ ಜೀಪನ್ನು ಮರೆಯಾಗಿ ನಿಲ್ಲಿಸಿ ಕಾಯುತ್ತಿದ್ದಾಗ, ಸಂಜೆಃ 5.00 ಗಂಟೆ ಸಮಯದಲ್ಲಿ ಒಬ್ಬ ಅಸಾಮಿ ಕೈಯಲ್ಲಿ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರನ್ನು ಹಿಡಿದುಕೊಂಡು ಅನುಮಾನಸ್ಪದ ರೀತಿಯಲ್ಲಿ ನಡೆದುಕೊಂಡು ಬರುತ್ತಿರುವುದು ಕಂಡುಬಂದಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರಃ**

**ಪ್ರಶ್ನೆ :3:** ಸಾಕ್ಷಿದಾರರು ಮುಂದುವರಿದು ಚಾಸಾ-1ರವರು ಚಾಸಾ-2 ಮತ್ತು 3ರವರ ಸಮಕ್ಷಮ ಅಸಾಮಿಯನ್ನು ಸುತ್ತುವರೆದು ನಿಲ್ಲಿಸಿ ಆತನ ಹೆಸರು, ವಿಳಾಸ ವಿಚಾರಿಸಲಾಗಿ ನಾಗ ಬಿನ್ ಚಿಕ್ಕಮಾದಶೆಟ್ಟಿ, ಬೇಡರಪುರ ಗ್ರಾಮ ಎಂದು ತಿಳಿಸಿದನು. ಪ್ಲಾಸ್ಟಿಕ್ ಕವರ್ ನಲ್ಲಿ ಏನಿದೆ ಎಂದು ವಿಚಾರಿಸಲಾಗಿ, ಮದ್ಯ ತುಂಬಿದ ಟೆಟ್ರಾ ಪ್ಯಾಕ್‌ಗಳಿದ್ದು, ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಲುವಾಗಿ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದನು. ಈ ಬಗ್ಗೆ ರಹದಾರಿ ಇದೆಯೇ ಎಂದು ಕೇಳಲಾಗಿ ಯಾವುದು ಇಲ್ಲ ಎಂದು ತಿಳಿಸಿದನು. ನಂತರ ಪ್ಲಾಸ್ಟಿಕ್ ಕವರನ್ನು ಬಿಚ್ಚಿ ನೋಡಲಾಗಿ ಅದರಲ್ಲಿ 90 ಎಂ.ಎಲ್.ನ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ ಮದ್ಯ ತುಂಬಿದ 30 ಟೆಟ್ರಾ ಪ್ಯಾಕ್ ಗಳು ಇರುವುದು ಕಂಡುಬಂದಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರಃ**

**ಪ್ರಶ್ನೆ :4:** ಸಾಕ್ಷಿದಾರರು ಮುಂದುವರಿದು ಅವುಗಳನ್ನು ಪರಿಶೀಲನೆ ಮಾಡಲಾಗಿ ಅವುಗಳ ಮೇಲೆ ಅಬಕಾರಿ ಕಮೀಷನರ್ ಸಹಿವುಳ್ಳ ಲೇಬಲ್ ಅಂಟಿಸಲಾಗಿತ್ತು. ಅದರ ಮುಖಬೆಲೆ ರೂ. 35.13 ನಮೂದಾಗಿದ್ದು, ಅದರ ಒಟ್ಟು ಬೆಲೆ ರೂ. 1,053/- ಆಗಿತ್ತು. ಅವುಗಳನ್ನು ಪಂಚರ ಸಮಕ್ಷಮ ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಡಲು 30 ಟೆಟ್ರಾ ಪ್ಯಾಕ್ ಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಅದರ ಬಾಯಿಯನ್ನು ದಾರದಿಂದ ಕಟ್ಟಿ "Q" ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಲಾಯಿತು. ನಂತರ ಪಂಚರ ಸಹಿವುಳ್ಳ ಚೀಟಿಯನ್ನು ಅವುಗಳ ಮೇಲೆ ಅಂಟಿಸಲಾಯಿತು. ಸ್ಥಳದಲ್ಲಿ ನಿಪಿ-1 ರಂತೆ ಪಂಚನಾಮೆ ಬರೆಯಲಾಯಿತು. ನಿಪಿ-1ನ್ನು 17.10 ರಿಂದ 17.50 ಗಂಟೆಯವರೆಗೆ ಬರೆಯಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರಃ**

**ಪ್ರಶ್ನೆ :5:** ಫ್ರಾಸಾ 4 ಲೋಕೇಶ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 10.03.2022 ರಂದು ಚಾಸಾ-9 ರವರಿಂದ ಕೇಸಿನ ಕಡತವನ್ನು ಪಡೆದುಕೊಂಡು ಪರಿಶೀಲಿಸಿ ತನಿಖೆ ಪೂರ್ಣಗೊಂಡಿದ್ದರಿಂದ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರಃ**

**ಪ್ರಶ್ನೆ :6:** ಫ್ರಾಸಾ 5 ರವಿ ಬಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 10.02.2022 ರಂದು ಚಾಸಾ10 ರವರು ತನಗೆ ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ 90 MLನ ಹೈವಾರ್ಡ್ ಚೀಯರ್ಸ್ ವಿಸ್ಕಿಯ 30 ಪೌಚುಗಳನ್ನು RFSL ಮೈಸೂರಿಗೆ ಪರೀಕ್ಷೆಗಾಗಿ ಕೊಟ್ಟು ಬಂದೆ. ಸ್ವೀಕೃತಿಯನ್ನು ಪಡೆದುಕೊಂಡು ಚಾಸಾ10 ರ ಮುಂದೆ ಹಾಜರು ಪಡಿಸಿ ಹೇಳಿಕೆ ಕೊಟ್ಟಿದ್ದೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರಃ**

**ಪ್ರಶ್ನೆ :7:** ಫ್ರಾಸಾ 7 ಮಹದೇವಸ್ವಾಮಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 08.02.2022 ರಂದು ಸಂಃ 6.20 ಗಂಟೆ ಸಮಯದಲ್ಲಿ ತಾನು ಠಾಣೆಯಲ್ಲಿದ್ದಾಗ ಚಾಸಾ-1ರವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಶಪಡಿಸಿಕೊಳ್ಳಲಾದ ಮುದ್ದೆಮಾಲುಗಳು ಮತ್ತು ಸ್ಯಾಂಪಲ್ ಗಳು ಹಾಗೂ ಆರೋಪಿಯನ್ನು ತನ್ನ ಮುಂದೆ ಹಾಜರುಪಡಿಸಿ ಒಂದು ಫಿರ್ಯಾದಿಯನ್ನು ನೀಡಿದ್ದು, ಅದರಂತೆ ಒಂದು ಮಹಜರ್ ಅನ್ನು ನೀಡಿರುತ್ತಾರೆ. ಅದನ್ನು ಸ್ವೀಕರಿಸಿ ತಾನು ಠಾಣಾ ಮೊ.ಸಂ-13/2022ರಂತೆ ಪ್ರಕರಣ ದಾಖಲಿಸಿದಂತೆ ಪ್ರ.ವ.ವರದಿಯನ್ನು ಘನ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೂ ಸಲ್ಲಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರಃ**

**ಪ್ರಶ್ನೆ :8:** ಫ್ರಾಸಾ 7 ರವರು ಮುಂದುವರಿದು ಆರೋಪಿಯನ್ನು ನಿಯಾಮಾನುಸಾರ ದಸ್ತಗಿರಿ ಮಾಡಿ ನ್ಯಾಯಾಲಯ ಬಂಧನಕ್ಕೆ ಹಾಜರುಪಡಿಸಿರುತ್ತೇನೆ. ಅಮಾನತ್ತುಪಡಿಸಿಕೊಳ್ಳಲಾಗಿದ್ದ ವಸ್ತುಗಳನ್ನು ಠಾಣಾ ಪಿ.ಎಫ್ ನಂ-12/2022ರಲ್ಲಿ ಅಳವಡಿಸಿಕೊಂಡು ಘನ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಈ ಕೇಸಿನ ಸಾಕ್ಷಿದಾರರಾದ ಚಾಸಾ-2 ರಿಂದ 6ರವರ ಹೇಳಿಕೆಯನ್ನು

ಪಡೆದುಕೊಂಡಿರುತ್ತೇನೆ. ಆ ನಂತರ ನಮ್ಮ ಸಿಬ್ಬಂದಿಯ ಮೂಲಕ ಸ್ಯಾಂಪಲ್ ಪಡೆದಿದ್ದ ಬಾಂಗಿಗಳನ್ನು RFSL ಗೆ ಕಳಹಿಸಿಕೊಟ್ಟಿರುತ್ತೇನೆ. RFSL ನಿಂದ ವರದಿಯ ದಿಃ 10.03.2022ರಂದು ಬಂದಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆ ನಂತರ ತನಿಖೆಯಲ್ಲಿ ಆರೋಪಿಯ ವಿರುದ್ಧ ಆರೋಪಿ ಸಾಬೀತಾದ್ದರಿಂದ ಅಂತಿಮ ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ ಚಾಸಾ–10ರವರಿಗೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರಃ**

**ಪ್ರಶ್ನೆ 9**: ನೀವು ಈ ಪ್ರಕರಣದ ಬಗ್ಗೆ ಇನ್ನೇನಾದರೂ ಹೆಚ್ಚಿನ ವಿಷಯಗಳನ್ನು ಹೇಳಲು ಬಯಸುವಿರಾ?

**ಉತ್ತರ**:

**ಪ್ರಶ್ನೆ 10**: ನೀವು ನಿಮ್ಮ ಪರವಾದ ಯಾವುದಾದರೂ ಸಾಕ್ಷ್ಯವನ್ನು ಮತ್ತು ದಾಖಲೆಗಳನ್ನು ಹಾಜರುಪಡಿಸುತ್ತೀರಾ ?

**ಉತ್ತರ**:

(ಆರೋಪಿಗೆ ಮೇಲಿನ ಪ್ರಶ್ನೆಗಳನ್ನು ತಿಳಿಯುವ ಕನ್ನಡ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನು ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು)

ದಿನಾಂಕಃ 29.09.2025

**(ಶ್ರೀ ಪ್ರಕಾಶ್ ಸಿ.ಡಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ,**
**ಚಾಮರಾಜನಗರ.**

**ಆರೋಪಿ ಸಹಿಃ**